# ಭಾಗ 3:
# ನರಾವತಾರದ ನಂತರ ಆತನ ಮಾನವತೆ

ಯೇಸುವಿನ ದೈವತ್ವದ ಮೇಲೆ ಸಾಕಷ್ಟು ಸಮಯವನ್ನು ನಾವು ಕಳೆದಿದ್ದೇವೆ. ಇದು ಇರ ಬೇಕಾದ ರೀತಿಯಲ್ಲಿಯೂ ಇರುತ್ತದೆ. ಅಗತ್ಯತೆಯು ಅಸ್ತಿತ್ವದಲ್ಲಿರುವುದು. ಉದಾಹರಣೆಗಾಗಿ ಅಮೇರಿಕಾವನ್ನು ಯೋಚಿಸಿರಿ. "ಧರ್ಮವು ಅಮೇರಿಕನ್ ಜೀವನದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸುತ್ತಿರುವುದೋ ಇಲ್ಲವೇ ತನ್ನ ಪ್ರಭಾವವನ್ನು ಕಳೆದು ಕೊಳ್ಳುತ್ತಿರುವುದೋ?" ಎಂಬ ಪ್ರಶ್ನೆಯು ಇತ್ತೀಚೆಗಿನ ಚುನಾವಣೆಯ ಸಮಯದಲ್ಲಿ ಕೇಳಲ್ಪಟ್ಟಿತು. ಉತ್ತರ ಕೊಟ್ಟವರಲ್ಲಿ 21 ಶತ ಜನರು ಧರ್ಮವು ತನ್ನ ಪ್ರಭಾವದಲ್ಲಿ ಬೆಳೆ ಯುತ್ತಿದೆ ಎಂದು ಉತ್ತರ ಕೊಟ್ಟರು; 65 ಪ್ರತಿಶತ ಜನರು ಅದು ತನ್ನ ಪ್ರಭಾವವನ್ನು ಕಳೆದು ಕೊಳ್ಳುತ್ತಿದೆ ಎಂದು ಉತ್ತರ ಕೊಟ್ಟರು. ಜಾರ್ಜ ಗ್ಯಾಲಿಪ್, ಜೂನಿಯರ್ ಎಂಬ ರಾಷ್ಟ್ರೀಯ ಮುಖ್ಯ ನಾಯಕನು ಅಮೇರಿಕನ್ನರದು, "ಬೈಬಲ ಅನಕ್ಷರಸ್ಥರ ದೇಶ; ಅಮೇರಿಕನ್ನರು ತಾನು ಏನು ನಂಬಿದ್ದೇವೆ ಇಲ್ಲವೇ ಯಾಕೆ ನಂಬುತ್ತೇವೆ ಎಂಬುದನ್ನು ತಿಳಿದಿರುವದಿಲ್ಲ" ಎಂದು ಹೇಳಿದ್ದಾನೆ.[1] "ಕ್ರೈಸ್ತತ್ವವನ್ನು" ತಮ್ಮ ವಿಶ್ವಾಸದಂತೆ ಅರಿಕೆ ಮಾಡುವ ಅನೇಕರ ಬಗ್ಗೆ ಅದು ಸತ್ಯವಾಗಿದ್ದರೆ ಯಾವುದೇ ರೀತಿಯಲ್ಲಿ ಕ್ರೈಸ್ತತ್ವಕ್ಕೆ ಒಪ್ಪಿಕೊಳ್ಳದ ಇಂದು ಜೀವಿಸುತ್ತಿರುವ ಬಿಲಿಯನ್‌ಗಟ್ಟಲೆ ಜನರ ಬಗ್ಗೆ ಏನು? ಹೌದು, ಯೇಸುವು ನಿಜವಾಗಿಯೂ ಕುಮಾರನಾದ ದೇವರಾಗಿದ್ದಾನೆ ಎಂದು ನಂಬುವಂತೆ ಮಾಡುವ ಮಹಾ ಪ್ರಬಂಧವನ್ನು ಕೊಡುವ ಅಗತ್ಯತೆಯಿದೆ.

ಹೀಗಿದ್ದರೂ ನಜರೇತಿನ ಯೇಸುವು ನಮ್ಮ ಹಾಗೆ ಮಾನವನಾಗಿದ್ದನು ಎಂಬುದನ್ನು ವಿವರಿಸುವ ಅಗತ್ಯತೆಯಿದೆ. ನಿಜವಾಗಿ ಶ್ರಮೆತಾಳುವ ಹಾಗೂ ಶೋಧನೆಯನ್ನು ಸಹಿಸಿಕೊಳ್ಳುವ, ಕ್ಷಮಿಸುವ, ರಕ್ಷಕನ ಬಗ್ಗೆ ತಿಳುವಳಿಕೆಯು ನಮಗೆ ಬೇರೆ ಹೇಗೆ ಇರಬಹುದು?

> ಆದುದರಿಂದ, ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರರಂತಾಗ ಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣೆ ಮಾಡುವದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾ ಯಾಜಕನಾದನು. ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿ ಸಲ್ಪಡುವವರಿಗೆ ಸಹಾಯ ಮಾಡುವದಕ್ಕೆ ಶಕ್ತನಾಗಿದ್ದಾನೆ (ಇಬ್ರಿಯ 2:17, 18).

ಯೇಸುವು ಕೇವಲ ಆತ್ಮನಾಗಿದ್ದನು - ದೇವರು ದೇಹದೊಂದಿಗೆ ಜೊತೆಯಾಗಿ ಜೀವಿಸಲಾರನು ಎಂದು ಕೆಲವರು ಬೋಧಿಸಿದ್ದಾರೆ. ಅದಕ್ಕೆ ವಿರುದ್ಧವಾಗಿ, ಯೇಸುವು ಶರೀರವಾಗಿದ್ದನು. ಆತನಿಗೆ ಹಸಿವೆಯಾಯಿತು (ಮತ್ತಾಯ 4:2); ಆತನಿಗೆ ಬಾಯಾರಿಕೆಯಾಯಿತು (ಯೋಹಾನ 19:28); ಆತನು ಆಯಾಸಗೊಂಡನು (ಯೋಹಾನ 4:6); ಆತನ ಭೂಲೋಕದ ದೇಹವು ಕಣ್ಣೀರು ಸುರಿಸಿತು (ಯೋಹಾನ 11:35),

ಬೆವರು ಸುರಿಸಿತು (ಲೂಕ 22:44) ಹಾಗೂ ರಕ್ತ ಸುರಿಸಿತು (ಯೋಹಾನ 19:34).

ಯೇಸುವಿನೊಂದಿಗೆ ಇದ್ದವರು ಆತನು ಅಸಮಾನ್ಯವಾದ ಮನುಷ್ಯನು ಆಗಿದ್ದನು ಎಂದು ತಿಳಿದಿದ್ದರು. ಆದರೆ ಆತನು ಮಾನವನಾಗಿದ್ದನು ಎಂಬುದರ ಬಗ್ಗೆ ಸಂಶಯವಿರಲಿಲ್ಲ.

© 2009 Truth for Today